

ಉಗುರುಗಳ ಮೇಲೆ ಬಗೆ ಬಗೆ ಚಿತ್ತಾರ ಮಾಡಿಕೊಳ್ಳುವುದು ಯುವತಿಯರ ಕ್ರೇಜ್! ಇದೀಗ ಜ್ಯುವೆಲ್ ನೇಲ್ ಆರ್ಟ್ ಹೆಚ್ಚು ಜನಪ್ರಿಯವಾಗುತ್ತಿದೆ.

ಆಶಾ ಎಸ್. ಕುಲಕರ್ಣಿ

# ಜ್ಯುವೆಲ್ ನೇಲ್ ಆರ್ಟ್

ಫ್ಯಾಷನ್ ಜಗತ್ತಿನ ಹೊಸ ಪ್ರಯೋಗಗಳಿಗೆ ಹೊಸತಾಗಿ ಸೇರ್ಪಡೆಯಾಗಿದ್ದು ನೇಲ್ ಆರ್ಟ್. ಅಂದದ ನೀಳ ಉಗುರಿನ ಮೇಲೆ ಬಗೆಬಗೆ ಉಗುರು ಬಣ್ಣಗಳನ್ನು ಬಳಸಿ ಕಾಮನಬಿಲ್ಲು, ವಾಟರ್ ಕಲರ್, ಅಕ್ರಲಿಕ್, ನಿಯಾನ್, ಎಚ್‌ಡಿ ನೇಲ್ ಆರ್ಟ್... ಹೀಗೆ ನಾನಾ ಬಗೆಯ ವಿನ್ಯಾಸಗಳನ್ನು ಮಾಡಿಕೊಳ್ಳುವುದು ಇಂದಿನ ಟ್ರೆಂಡ್. ಇವುಗಳ ಸಾಲಿಗೆ ಈಗ ಹೊಸದಾಗಿ ಸೇರ್ಪಡೆಯಾದದ್ದು ಜ್ಯುವೆಲ್ ನೈಲ್ ಆರ್ಟ್.

ಉಗುರಿನ ಮೇಲೆ ಅಥವಾ ನೇಲ್ ಪಾಲಿಶ್ ಹಚ್ಚಿದ ಉಗುರಿನ ಮೇಲೆ ಸಣ್ಣ ಸಣ್ಣ ಹರಳು, ಮುತ್ತು ಸೇರಿದಂತೆ ಫಳ ಫಳ ಹೊಳೆಯುವ ಡೆಕೊರೇಟಿವ್ ವಸ್ತುಗಳಿಂದ ಉಗುರುಗಳ ಅಂದವನ್ನು ಹೆಚ್ಚಿಸುವ ಒಂದು ಕಲೆಯೇ ಜ್ಯುವೆಲ್ ನೇಲ್ ಆರ್ಟ್. ಕುಂದನ್, ಚಮ್ಕಿ, ಸಣ್ಣ ಸಣ್ಣ ಕ್ರಿಸ್ಟಲ್, ಜೆಲ್ ಗ್ಲಿಟರ್, ಡಾರ್ಕ್ ಆ್ಯಂಡ್ ಲೈಟ್ ಕಲರ್ ಸ್ಟೋನ್, ಗೋಲ್ಡ್ ಆ್ಯಂಡ್ ಸಿಲ್ವರ್ ಕಲರ್ ಜುವೆಲ್ಸ್, ಮಲ್ಟಿ ಕಲರ್ ಜೆಮ್ಸ್ ಮುಂತಾದ ಚಿಕ್ಕ ಚಿಕ್ಕ ವಸ್ತುಗಳನ್ನು ಉಗುರಿನ ಮೇಲೆ ಸುಂದರವಾಗಿ ಹಾಗೂ ಕಲಾತ್ಮಕವಾಗಿ ಜೋಡಿಸಿ ಉಗುರುಗಳಿಗೆ ನ್ಯೂ ಕ್ಲಾಸಿ, ಗ್ರ್ಯಾಂಡ್ ಮತ್ತು ರಾಯಲ್ ಲುಕ್ ನೀಡಬಹುದು.

ಪಾರ್ಟಿ ಇರಲಿ ಅಥವಾ ಮನೆಯ ಚಿಕ್ಕ ಪುಟ್ಟ ಸಮಾರಂಭವೇ ಇರಲಿ ಪ್ರತಿಸಲವೂ ಹೊಸ ಹೊಸ ನೇಲ್ ಆರ್ಟ್‌ನೊಂದಿಗೆ ಯುವತಿಯರು. ಪುಟ್ಟ ಹುಡುಗಿಯರು ಸಿದ್ಧರಾಗುತ್ತಾರೆ. ನೇಲ್ ಆರ್ಟ್‌ಗಳಲ್ಲಿ ಸಾಕಷ್ಟು

